Add: #7, 17th Cross, Off Margosa Road, Malleshwaram, Bangalore-560055. Phone: 080-23449516/17, Web: www.tradevisionindia.com

## ಎಪ್ರಿಲ್ – ಜುಲೈ 2018ರ ಅವಧಿಯ ವಿಶೇಷ ದಿನಗಳು

| | |
|---|---|
| ಎಪ್ರಿಲ್ 15, ಭಾನುವಾರ | – ಸೌರ ಯುಗಾದಿ (ವಿಷು) ವಿಲಂಬಿ ಸಂವತ್ಸರ ಆರಂಭ |
| ಎಪ್ರಿಲ್ 16, ಸೋಮವಾರ | – ಅಮಾವಾಸ್ಯೆ |
| ಏಪ್ರಿಲ್ 17, ಮಂಗಳವಾರ | – ವೈಶಾಖ ಮಾಸಾರಂಭ |
| ಎಪ್ರಿಲ್ 18, ಬುಧವಾರ | – ಅಕ್ಷಯ ತೃತೀಯಾ |
| ಎಪ್ರಿಲ್ 26, ಗುರುವಾರ | – ಸರ್ವೈಕಾದಶೀ |
| ಏಪ್ರಿಲ್ 29, ಭಾನುವಾರ | – ನರಸಿಂಹ ಜಯಂತಿ |
| ಏಪ್ರಿಲ್ 30, ಸೋಮವಾರ | – ಬುದ್ಧ ಹುಣ್ಣಿಮೆ |
| ಮೇ 01, ಮಂಗಳವಾರ | – ಕಾರ್ಮಿಕರ ದಿನಾಚರಣೆ |
| ಮೇ 11, ಶುಕ್ರವಾರ | – ಸರ್ವೈಕಾದಶೀ |
| ಮೇ 12, ಶನಿವಾರ | – ಕರ್ನಾಟಕ ವಿಧಾನಸಭಾ ಚುನಾವಣೆ |
| ಮೇ 14, ಸೋಮವಾರ | – ವೃಷಭ ಸಂಕ್ರಮಣ |
| ಮೇ 15, ಮಂಗಳವಾರ | – ಅಮಾವಾಸ್ಯೆ |
| ಮೇ 16, ಬುಧವಾರ | – ಅಧಿಕ ಜ್ಯೇಷ್ಠ ಮಾಸ, ಗ್ರೀಷ್ಮ ಋತು ಆರಂಭ |
| ಮೇ 20, ಭಾನುವಾರ | – ಬಳಗದ ವಸಂತೋತ್ಸವ |
| ಮೇ 24, ಗುರುವಾರ | – ಭಾಗೀರಥಿ ಜನ್ಮದಿನ, ಪತ್ತನಾಜೆ |
| ಮೇ 25, ಶುಕ್ರವಾರ | – ಸರ್ವೈಕಾದಶೀ |
| ಮೇ 29, ಮಂಗಳವಾರ | – ಹುಣ್ಣಿಮೆ |
| ಜೂನ್ 10, ಭಾನುವಾರ | – ಸರ್ವೈಕಾದಶೀ |
| ಜೂನ್ 13, ಬುಧವಾರ | – ಅಮಾವಾಸ್ಯೆ |
| ಜೂನ್ 14, ಗುರುವಾರ | – ನಿಜ ಜ್ಯೇಷ್ಠ ಮಾಸಾರಂಭ |
| ಜೂನ್ 15, ಶುಕ್ರವಾರ | – ಮಿಥುನ ಸಂಕ್ರಮಣ |
| ಜೂನ್ 21, ಗುರುವಾರ | – ದಕ್ಷಿಣಾಯನ ಆರಂಭ |
| ಜೂನ್ 23, ಶನಿವಾರ | – ಸರ್ವೈಕಾದಶೀ |
| ಜೂನ್ 28, ಗುರುವಾರ | – ಹುಣ್ಣಿಮೆ |
| ಜುಲೈ 09, ಸೋಮವಾರ | – ಸರ್ವೈಕಾದಶೀ |
| ಜುಲೈ 13, ಶುಕ್ರವಾರ | – ಅಮಾವಾಸ್ಯೆ |
| ಜುಲೈ 14, ಶನಿವಾರ | – ಆಷಾಢ ಮಾಸಾರಂಭ |
| ಜುಲೈ 16, ಸೋಮವಾರ | – ಕರ್ಕಾಟಕ ಸಂಕ್ರಮಣ |

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)**

## ಹರಿದ್ವರ್ಣ ವಿಶ್ವದ ಚೈತ್ರ

**(ವಸಂತ ಋತುವಿನ ಸಂದರ್ಭದಲ್ಲಿ ಸಮಯೋಚಿತ ಕವನ)**

ಹರಿದ್ವರ್ಣ ವಿಶ್ವದಲಿ ಎಲ್ಲೆಲ್ಲೂ ಹಸುರಿನಿಂ
ಕಂಗೊಳಿಪ ಕನ್ನಡದ ನಾಡಿದುವೆ ನಮ್ಮದು
ಭೂಮಿಯ ಆಳದಿಂ ನೆಲದೊಡಲ ಸೀಳುತಲಿ
ಮೇಲುಕ್ಕಿ ಬರುತಿರುವ ಹಸುರು ಚಿನ್ನ

ಚಿಗುರೆಲೆಯ ಮಧ್ಯದಲಿ ಮೊಗ್ಗುಗಳು ಮೂಡುತಲಿ
ಎತ್ತರೆತ್ತರ ಬೆಳೆದು ಮನಸ್ಸಿಗಾಹ್ಲಾದ
ಕೆಂಚಿಗುರು ಹಸುರಾಗಿ ಮೊಗ್ಗರಳಿ ಹೂವಾಗಿ
ಟಿಸಿಲೊಡೆದು ಮೇಲ್ಬರಲು ಮನಕೆ ಮುದವು

ಹೂವಿನಾ ದಳಗಳು ನೈಜವರ್ಣವ ತಾಳಿ
ಪ್ರಕೃತಿಯ ಮಡಿಲಿನಾ ಸೌಂದರ್ಯರೂಪ
ನಿಸರ್ಗದಾ ಕೊಡುಗೆಯಲಿ ಬೇಧವಿಲ್ಲವೇ ಇಲ್ಲ
ಪ್ರೀತಿಯಾ ಅಮೃತವನು ಹರಿಸುವುದೇ ಧರ್ಮ

ತಂಗಾಳಿ ಬೀಸುತಿರೆ ತೊನೆದಾಡುವಾ ಪುಷ್ಪ
ಮನಕದುವೆ ಆನಂದ ಚಿಂತೆ ಇನ್ನೇಕೆ
ಉದ್ಯಾನನಗರಿಯಿದೊ ಪುಷ್ಪಗಳ ತವರೂರು
ವಿಶ್ವದೆಲ್ಲೆಡೆಗಾಗಿ ಭಾರತೀಯ ಕೊಡುಗೆ

- **ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತಿ - ಅಂಕಣಕಾರ

***

**ಭೃಗುವಾಣಿಯ ಸಮಸ್ತ ಓದುಗರಿಗೆ**
**ಮತ್ತು ಜಾಹೀರಾತುದಾರರಿಗೆ**
**ವಿಲಂಬಿ ಸಂವತ್ಸರದ**
**ಶುಭಾಶಯಗಳು**

***

**ಆರೋಗ್ಯ ಕಾಳಜಿ : 6**

# ಅಸಿಡಿಟಿ



ಅಸಿಡಿಟಿ ಸಾಮಾನ್ಯವಾಗಿ ಎಲ್ಲರನ್ನೂ ಕಾಡುವ ಸಮಸ್ಯೆ. ಜಠರದಲ್ಲಿ ಉತ್ಪಾದನೆಯಾಗುವ ಅಸಿಡ್ ಜಾಸ್ತಿಯಾಗಿ ಉಂಟಾಗುವ ದುಷ್ಪರಿಣಾಮ ಎಂದು ಕರೆಯುತ್ತಾರೆ. ಹೀಗೆ ಆಗಲು ಕಾರಣಗಳು ಹಲವು.

1) ಸಿಗರೇಟು ಸೇದುವುದು, 2) ಮದ್ಯಪಾನ ಮಾಡುವುದು. 3) ಖಾಲಿಹೊಟ್ಟೆಯಲ್ಲಿ ಪದೇ ಪದೇ ಕಾಫಿ, ಟೀ ಕುಡಿಯುವುದು, 4) ಅತೀ ಖಾರಾ ಅಥವಾ ಅತೀ ಎಣ್ಣೆ ತಿಂಡಿ, ತಿನಿಸು ತಿನ್ನುವುದು. 5) ಸರಿಯಾದ ವೇಳೆಗೆ ಊಟ, ತಿಂಡಿ ಮಾಡದೆ ಇರುವುದು. 6) ಖಾಲಿ ಹೊಟ್ಟೆಯಲ್ಲಿ ತುಂಬಾ ಸಮಯ ಕೆಲಸ ಆಡುವುದು. 7) ಅತಿಯಾದ ಮಾನಸಿಕ ಒತ್ತಡವಿರುವುದು. 8) ಆಗಾಗ್ಗೆ ನೋವು ಉಮಶಮನ ಮಾತ್ರೆ ಸೇವಿಸುವುದು. 9) ಎಚ್. ಪೈರೊರಿ ಬ್ಯಾಕ್ಟೀರಿಯಾದ ಸೋಂಕು ತಗಲುವುದು. 10) ಬೇರೆ ಖಾಯಿಲೆಗಳಿಗೆ ತೆಗೆದುಕಳ್ಳುವ ಮಾತ್ರೆ ಔಷಧಿಗಳಿಂದಾಗಿ ಉಂಟಾಗುವುದು.

ಇದರದೆ ಚಿಹ್ನೆಗಳು ಬಹಳ – ಹೊಟ್ಟೆಹುರಿ, ಎದೆ ಉರಿ, ಹೊಟ್ಟೆ ಖಾಲಿಯಾದ ಅನುಭವ, ಸುಸ್ತು ಆಗುವುದು, ಹೊಟ್ಟೆ ಉಬ್ಬರ ಆಗುವುದು, ಹುಳಿ, ಖಾರಾ ತೇಗುವುದು, ಆಹಾರ ಸೇವನೆ ನಂತರ ಹೊಟ್ಟೆನೋವು ಬರುವುದು. ಮೈ ಬಿಸಿಯಾಗುವುದು, ಬೆವರುವುದು, ಪದೇ ಪದೇ ಹಸಿವು ಆಗುವುದು, ಸ್ವಲ್ಪ ತಿಂದ ಕೂಡಲೇ ಹೊಟ್ಟೆ ತುಂಬಿದ ಅನುಭವ ಆಗುವುದು ಇತ್ಯಾದಿ. ಈ ತೊಂದರೆಗೆ ಪರಿಹಾರ ಸುಲಭ. ಮುಖ್ಯವಾಗಿ ಆಗಾಗ್ಗೆ ಆಹಾರ ತೆಗೆದುಕೊಳ್ಳುವುದು. ಖಾಲಿ ಹೊಟ್ಟೆಯಲ್ಲಿ 4 ಗಂಟೆಗಿಂತ ಜಾಸ್ತಿ ಹೊತ್ತು ಇರಬಾರದು. ಖಾಲಿ ಹೊಟ್ಟೆಯಲ್ಲಿ ಕಾಫಿ, ಟೀ ಸೇವಿಸಬಾರದು. ಖಾಲಿ ಹೊಟ್ಟೆಯಲ್ಲಿದ್ದಾಗ ಅತಿ ಖಾರಾ ಇರುವ ಅಥವಾ ತುಂಬಾ ಜಿಡ್ಡು ಇರುವ ತಿಂಡಿತಿನಿಸು ತಿನ್ನಬಾರದು. ಧೂಮಪಾನ ಮತ್ತು ಮದ್ಯಪಾನ ಸಂಪೂರ್ಣವಾಗಿ ನಿಲ್ಲಿಸುವುದು. ಮಾನಸಿಕ ಒತ್ತಡ ಕಡಿಮೆ ಮಾಡಿಕೊಳ್ಳುವುದು. ಸಾಧ್ಯವಾದಷ್ಟು ಸಾತ್ವಿಕ ಆಹಾರ ಸೇವನೆ ಮಾಡುವುದು – ತರಕಾರಿ ಜಾಸ್ತಿ, ಖಾರಾ ಕಡಿಮೆ, ಎಣ್ಣೆ ಕಡಿಮೆ, ಹಾಲು, ಮೊಸರು, ಯಥೇಚ್ಚವಾಗಿ ಉಪಯೋಗಿಸುವುದು, ನೀರು ಜಾಸ್ತಿ ಕುಡಿಯುವುದು, ವೈದ್ಯರ ಸಲಹೆ ಇಲ್ಲದೆ ನೋವುನಿವಾರಕ ಮಾತ್ರೆ ತೆಗೆದುಕೊಳ್ಳಬಾರದು. ಎಚಪೈರೊರಿ ಸೋಂಕಿಗೆ ಸರಿಯದ ಔಷಧಿ ತೆಗೆದುಕೊಳ್ಳುವುದು. ವ್ಯಾಯಾಮ ಮಾಡುವುದು, ಬೇರೆ ಖಾಯಿಲೆಗಳಿಗೆ ತೆಗೆದುಕೊಳ್ಳುವ ಔಷಧಿಗಳು ಜೊತೆಗೆ ಅಸಿಡಿಟಿ ಕಡಿಮೆ ಮಾಡುವ ಮಾತ್ರೆ ತೆಗೆದುಕೊಳ್ಳುವುದು, ಮಲವಿಸರ್ಜನೆ ಸರಿಯಾಗಿ ಆಗುವಂತೆ ನೋಡಿ ಕೊಳ್ಳುವುದು. ಈ ತೊಂದರೆಯನ್ನು ಖಚಿತಪಡಿಸಿಕೊಳ್ಳಲು ಎಂಡೋಸ್ಕೋಪಿ ಎಂಬ ಪರೀಕ್ಷೆ ಮಾಡಿಸಬಹುದು.

**– ಡಾ. ನಾಗೇಂದ್ರ ಹೆಬ್ಬಾರ್**

(ಇನ್ನೊಂದು ಟಿಪ್ಸ್ : ಮುಂದಿನ ಸಂಚಿಕೆಯಲ್ಲಿ)

# ಯುಗಾದಿ – ಸಂವತ್ಸರ

ನಾರಾಯಣನು ಲೋಕಾತ್ಮಕವಾದ ನಾಭಿ ಕಮಲದಿಂದ ಹಿಂದಿನ ಬ್ರಹ್ಮಾಂಡದ ಪ್ರಾಣವನ್ನು ಮಗನಾಗಿ ಸೃಷ್ಠಿಗೈದನು. ಆತ ಬ್ರಹ್ಮಾಂಡ ದೊಡೆಯನಾಗಿ ನಾರಾಯಣನ ಅಪ್ಪಣೆಯಂತೆ ಮುಂದಿನ ಎಲ್ಲದರ ಸೃಷ್ಠಿ ಪುರುಷನೆನಿಸಿದನು. ಆ ಆರಂಭದ ಸೃಷ್ಠಿ ದಿನವೇ ಯುಗಾದಿ ಎನಿಸಿತು.

ವರ್ಷವನ್ನು ಐದು ರೀತಿಯಲ್ಲಿ ನಿಯಮಿಸ ಲಾಗಿದೆ. ಖಗೋಳದಲ್ಲಿ ಸೂರ್ಯ ಭ್ರಮಣ ಪೂರ್ಣವಾದರೆ ಆ ಕಾಲ ಸಂವತ್ಸರ. ಇದು ಹನ್ನೆರಡು ರಾಶಿಗಳಲ್ಲಿನ ಸಂಕ್ರಮಣವನ್ನು ತಿಳಿಸುತ್ತದೆ. ಚಂದ್ರನು ಚೈತ್ರಾದಿ ಹನ್ನೆರಡು ತಿಂಗಳಲ್ಲಿ ಮೂವತ್ತು ಮೂವತ್ತು ತಿಥಿಗಳನ್ನು ಕಳೆದರೆ ಆ ಕಾಲ ವತ್ಸರ (ಉದ್ವತ್ಸರ) ಎನಿಸುವುದು. ಹೀಗೆಯೇ ಗುರು – ಬೃಹಸ್ಪತಿಯ ಸಂಕ್ರಮಣದ ಕಾಲ ಪರಿವತ್ಸರ ಎನಿಸಿತು. ಕೇವಲ 360 ದಿನದ ಲೆಕ್ಕವಾದರೆ ಆ ಕಾಲಾವಧಿ ಅನುವತ್ಸರ ಎನಿಸಿದೆ. ಇದನ್ನು ಸಾವನ ಎಂದು ಗುರುತಿಸುವರು. 27 ನಕ್ಷತ್ರಗಳ ಹನ್ನೆರಡು ಬಾರಿಯ ಸುತ್ತಾಟದ ಲೆಕ್ಕವು ಇಡಾವತ್ಸರ ಎನಿಸುವುದು.

**(ಕೃಪೆ : ಸುಗುಣಮಾಲಾ)**

# ಬ್ರಾಹ್ಮಣ ಪ್ರತಿಭೆಗಳನ್ನು ವಿದೇಶಗಳ ಪಾಲಾಗಿಸುವ ತಂದೆ ತಾಯಂದಿರು

ಬ್ರಾಹ್ಮಣ ಪೋಷಕರಿಗೊಂದು ಕಿವಿಮಾತು. ಪ್ರತಿಭಾವಂತ ಮಕ್ಕಳಿರುವ ತಂದೆ ತಾಯಿಗಳಲ್ಲೊಂದು ಗೀಳು ಮನೆಮಾಡಿದೆ. ತಮ್ಮ ಮಕ್ಕಳು - ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗಬೇಕು. ಅಲ್ಲಿ ಶಿಕ್ಷಣಪೂರ್ತಿಯಾದ ನಂತರ - ಅಮೇರಿಕ ಇಂಗ್ಲೆಂಡ್ ಇತ್ಯಾದಿ ವಿದೇಶಗಳಲ್ಲಿ ಡಾಲರುಗಳಲ್ಲಿ ಹಣ ಸಂಪಾದಿಸಬೇಕು - ಅಲ್ಲಿಯೇ ಮನೆ-ಕಾರು ಇತ್ಯಾದಿಯೊಡನೆ ವೈಭವೋಪೇತ ಜೀವನ ಮಾಡಬೇಕು ಇತ್ಯಾದಿ ಕನಸುಗಳನ್ನು ಕಾಣುವವರೇ ಹೆಚ್ಚಾಗಿರುವುದು ಎಲ್ಲೆಡೆ ಕಂಡು ಬರುವ ದೃಶ್ಯ. ಇಲ್ಲೊಂದು ಗಮನಾರ್ಹ ಸಂಗತಿಯೆಂದರೆ ಭಾರತದಲ್ಲಿ ತಮ್ಮ ಚಿಕ್ಕಂದಿನ ದಿನಗಳ ವಿದ್ಯೆ, ಕುಟುಂಬ ಪರಿಸರ, ನಮ್ಮ ಸಂಸ್ಕೃತಿಯ ಒಡನಾಟ ಇತ್ಯಾದಿಯೊಡನೆ ಸ್ವತಂತ್ರ ಜೀವಿಗಳಾದವರಿಗೆ ಅಮೇರಿಕದ ವಾಸ - ಉಸಿರುಕಟ್ಟಿಸುವ ವಾತಾವರಣ ಮೂಡಿಸುತ್ತಿದ್ದು ಸಹಜ. ಆ ಹಿನ್ನೆಲೆಯಲ್ಲಿ ವಿದೇಶದಲ್ಲಿ ನೆಲೆಗೊಂಡ ಮಕ್ಕಳ ಪೋಷಕರು - ತಮ್ಮ ವೃದ್ಧಾಪ್ಯವನ್ನು ಭಾರತದಲ್ಲಿಯೇ ಕಳೆಯುತ್ತಾ ಬವಣೆಯ ಜೀವನ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಒಮ್ಮೆ ವಿದೇಶದ ವಾತಾವರಣಕ್ಕೆ ಬೆರೆತುಕೊಂಡ ಯುವ ಪೀಳಿಗೆ-ಮತ್ತೆ ಭಾರತಕ್ಕೆ ಬರಲು ನಕಾರಾತ್ಮಕರಾಗಿ ಸ್ಪಂದಿಸುತ್ತಾರೆ. ಅದರಲ್ಲೂ ಮದುವೆಯಾದ ಯುವ ದಂಪತಿಗಳು ತಮ್ಮ ಮಕ್ಕಳಿಗೆ ವಿದೇಶದಲ್ಲಿ ಶಿಕ್ಷಣ ಕೊಡಲಾರಂಭಿಸಿದ ನಂತರ ಆ ಮಕ್ಕಳು ಭಾರತಕ್ಕೊಮ್ಮೆ ಬಂದಾಗ ಪ್ರಥಮದಲ್ಲಿ ಹಿರಿಯರನ್ನು ಗುರುತಿಸದಿರುತ್ತಿದ್ದು ಎರಡನೆಯದು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ಮತ್ತೆ ವಿದೇಶಕ್ಕೆ ಹಾರುವುದು ಎಲ್ಲೆಡೆ ನಡೆಯುತ್ತಿದೆ.

ಇಲ್ಲಿನ ಹಿರಿಯರು ವಿದೇಶದಲ್ಲಿ ಸಿಗುವ ವೇತನವಾದ ಡಾಲರ್ ಮೊತ್ತವನ್ನು ಭಾರತೀಯ ರೂಪಾಯಿಯೊಂದಿಗೆ ತುಲನೆಮಾಡಿ ಕಂಡು ಬರುವ ಮೊತ್ತದಿಂದ ಪ್ರಭಾವಿತರಾಗುತ್ತಾರೆ. ಆದರೆ ಆ ಹಿರಿಯರು ಭಾರತೀಯ ವಸ್ತುಗಳ ಬೆಲೆ ಭಾರತದಲ್ಲಿ ಒಂದು ರೂಪಾಯಿಗೆ ಸಿಗುವಂತಹುದು. ಅಮೇರಿಕದಲ್ಲು ಒಂದು ಡಾಲರ್ - ಅರ್ಥಾತ್ 65 ರೂಪಾಯಿ ನೀಡಬೇಕಾದ ಸತ್ಯವನ್ನು ಮರೆಯುತ್ತಾರೆ.

ಅಲ್ಲಿ ಸಿಗುವ ಡಾಲರ್ ವೇತನದಲ್ಲಿ ಅಧಿಕ ಭಾಗ ವೆಚ್ಚಕ್ಕೆ ಸರಿದೂಗುವುದನ್ನು ಗಮನಿಸುವುದೇ ಇಲ್ಲ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ನಮ್ಮ ಬ್ರಾಹ್ಮಣ ಸಮಾಜದ ಹಿರಿಯರು ಯಾರೂ ಆಸರೆಯಿಲ್ಲದೆ ವಾರ್ಧಕ್ಯವನ್ನು ಕಳೆಯುವ ಅನಿವಾರ್ಯತೆಗೆ ಒಳಗಾಗುತ್ತಾರೆ. ಇದೊಂದು ಶೋಚನೀಯ ಸಂಗತಿ. ಇನ್ನು ಬ್ರಾಹ್ಮಣ ಜನಾಂಗವೆಂದರೆ - ಪ್ರತಿಭೆಯ ಸರೋವರದಲ್ಲಿ ಮುಳುಗೇಳುತ್ತಿರುವವರಾಗಿ ಭಾರತಕ್ಕೆ ಆ ಪ್ರತಿಭೆಗಳ ಸೇವೆ ದೊರಕದಿರುವುದು ಪ್ರಸ್ತುತ ವಿದ್ಯಮಾನ.

ಈ ನಿಟ್ಟಿನಲ್ಲಿ ನನ್ನ ಅನಿಸಿಕೆಯನ್ನು ತಮ್ಮ ಮುಂದಿಡ ಬಯಸುತ್ತೇನೆ. ಅದೆಂದರೆ ಹೆಚ್ಚಿನ ಶಿಕ್ಷಣಕ್ಕಾಗಿ ವಿದೇಶಕ್ಕೆ ಹೋದವರು ಶಿಕ್ಷಣ ವೆಚ್ಚಕ್ಕಾಗಿ ಮಾಡಿದ ಬ್ಯಾಂಕ್ ಸಾಲವನ್ನು ಚುಕ್ತಮಾಡಿದ ನಂತರ ಅಲ್ಲಿ ಮೂರುನಾಲ್ಕು ವರ್ಷ ಉದ್ಯೋಗದಲ್ಲಿದ್ದು ಸಾಕಷ್ಟು ಮೊತ್ತದೊಂದಿಗೆ ಜನ್ಮಭೂಮಿಗೆ ವಾಪಾಸು ಬಂದರೆ ಭಾರತೀಯ ಪ್ರತಿಭೆಗಳ ವಂಶ ವಿದೇಶದ ಪಾಲಾಗುತ್ತಿರುವುದು ತಪ್ಪುತ್ತದೆ. ಹಾಗೆಯೇ ಹಿರಿಯರೂ ಅತ್ಯಂತ ಸುಖ ಶಾಂತಿ-ನೆಮ್ಮದಿಯ ಜೀವನ ನೋಡುವುದು ಸಾಧ್ಯವಾಗುತ್ತದೆ. ಮೊಮ್ಮಕ್ಕಳು ತಾತ ಅಜ್ಜಿಯರನ್ನು ಗುರುತಿಸಿ ಅವರ ತೋಳಿನಲ್ಲಿ ನೆಮ್ಮದಿಯನ್ನು ಕಾಣುತ್ತಾರೆ. ಇದೊಂದು ಅತ್ಯಂತ ಗಂಭೀರ ಹಾಗೂ ಚಿಂತನಾರ್ಹ ವಿಷಯವಲ್ಲವೇ?

**- ಕೋಟೇಶ್ವರ ಸೂರ್ಯನಾರಾಯಣ ರಾವ್**

## ಶೀಲಂ ಪರಂ ಭೂಷಣಂ

ಐಶ್ವರ್ಯ ಬಂದಾಗ ಹತ್ತು ಜನರ ಉಪಯೋಗಕ್ಕಾಗಿ ಬಳಸುವುದು, ಬಲಿಷ್ಟನಾದಾಗ ಮಾತನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಪಂಡಿತನಾದಾಗ ವಾಕ್ಚಾತುರ್ಯ ತೋರಿಸಿಕೊಳ್ಳದೆ ಇರುವುದು, ವಿದ್ಯಾವಂತನಾದಾಗ ವಿನಯನಾಗಿರುವುದು, ಶ್ರೀಮಂತನಾದಾಗ ಸತ್ಪಾತ್ರರಿಗೆ ದಾನ ಮಾಡುವುದು, ತಪಸ್ವಿಯಾದವನಿಗೆ ಕೋಪ ಬರದಿರುವುದು, ಅಧಿಕಾರ ಬಂದಾಗ ಕ್ಷಮಿಸುವುದು ಈ ಎಂಟು ವಿಶಿಷ್ಠವಾದ ಗುಣಗಳನ್ನು ಶೀಲವೆಂಬ ತಲೆಗೆ ತೊಡಿಸಿದ ಶ್ರೇಷ್ಠ ಭೂಷಣ ಎನ್ನುತ್ತಾರೆ.

**- ಮಹಾಭಾರತ**

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ , ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

ಉದ್ಯಮ :
**ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್**
21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು – 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಬಹುಮುಖ ಪ್ರತಿಭೆಯ ಶ್ರೇಯಾ ಬಾಲಾಜಿ



ಬಳಗದ ಹಿರಿಯ ಪೋಷಕ ಸದಸ್ಯ ದಂಪತಿಗಳಾದ ಶ್ರೀ ಕೃಷ್ಣದಾಸ್ ದಂಪತಿಗಳ ಮೊಮ್ಮಗಳಾದ ಹಾಗೂ ಶ್ರೀ ಎನ್. ಬಾಲಾಜಿ ಮತ್ತು ಶ್ರೀಮತಿ ಸಪ್ನಾ ಬಾಲಾಜಿಯವರ ಸುಪುತ್ರಿಯಾದ ಕುಮಾರಿ ಶ್ರೇಯಾ ಬಾಲಾಜಿ ಬಳಗಕ್ಕೆ ತನ್ನ ಪ್ರತಿಭಾ ಪ್ರದರ್ಶನದ ಮೂಲಕ ಚಿರಪರಿಚಿತ ಕಲಾವಿದೆ. ತನ್ನ ನಾಲ್ಕರ ಹರೆಯದಲ್ಲೇ ನಾಟ್ಯ ಕ್ಷೇತ್ರದತ್ತ ಆಕರ್ಷಿತಳಾದ ಕುಮಾರಿ ಶ್ರೇಯಾ ಬಾಲಾಜಿ ಭರತನೃತ್ಯ ಕ್ಷೇತ್ರದ ನಕ್ಷತ್ರ ಎಂದರೆ ಅತಿಶಯವಲ್ಲ. ಪ್ರಾರಂಭದಲ್ಲಿ ಗುರು ಶ್ರೀಮತಿ ಗಿರಿಜಾ ಶಾಮಣ್ಣ ಅವರಿಂದ ಐದು ವರ್ಷಗಳ ಕಾಲ ತರಬೇತಿ ಪಡೆದ ಶ್ರೇಯಾ ಬಳಿಕ ಕಳೆದ ಹದಿನೈದು ವರ್ಷಗಳಿಂದ ಕಲಾಶ್ರೀ ಶ್ರೀಮತಿ ರೇವತಿ ನರಸಿಂಹನ್ ಅವರಿಂದ ವಳವೂರ್ ಶೈಲಿಯಲ್ಲಿ ಭರತನೃತ್ಯ ಕಲೆಯ ತರಬೇತಿ ಪಡೆಯುತ್ತಿದ್ದಾಳೆ. 2008ರ ಜುಲೈ ತಿಂಗಳಲ್ಲಿ ಬೆಂಗಳೂರಿನಲ್ಲಿ ರಂಗಪ್ರವೇಶ ಮಾಡಿದ ಶ್ರೇಯಾ ಗುರುಹಿರಿಯರ ಮತ್ತು ಅತಿಥಿಗಣ್ಯರ ಮೆಚ್ಚುಗೆಗೆ ಪಾತ್ರಳಾಗಿದ್ದಾಳಲ್ಲದೆ ನೃತ್ಯ ವಿಮರ್ಶಕರಿಂದಲೂ ಶಹಬ್ಬಾಸ್ ಗಿರಿ ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಸರಕಾರ ನಡೆಸುವ ಭರತನಾಟ್ಯ ಜೂನಿಯರ್ ಪರೀಕ್ಷೆಯಲ್ಲಿ 3ನೇ ಸ್ಥಾನ, ಸೀನಿಯರ್ ಪರೀಕ್ಷೆಯಲ್ಲಿ 2ನೇ ಸ್ಥಾನ, ವಿದ್ವತ್‌ಪೂರ್ವ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ, ಹಾಗೂ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ ಉನ್ನತ ಅಂಕಗಳನ್ನು ಗಳಿಸಿ ಉತ್ತೀರ್ಣಳಾಗಿದ್ದಾಳೆ. ದೂರದರ್ಶನ ಕಾಲಾವಿದೆಯಾಗಿಯೂ ಗುರುತಿಸಿಕೊಂಡಿದ್ದಾಳೆ.

ಐಸಿಎಸ್‌ಸಿ ಹತ್ತನೇ ತರಗತಿ ಮತ್ತು ಎರಡನೇ ಪಿಯುಸಿಯಲ್ಲಿ ಶೇ.94 ಅಂಕ ಗಳಿಸಿ ಉತ್ತಮ ರೀತಿಯಲ್ಲಿ ತೇರ್ಗಡೆಯಾಗಿರುವ ಶ್ರೇಯಾ ಎಂ.ಎಸ್.ರಾಮಯ್ಯ ತಾಂತ್ರಿಕ ಕಾಲೇಜಿನಲ್ಲಿ ಆರ್ಕಿಟೆಕ್ಚರ್ ಪದವಿಯಲ್ಲಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಗಳಿಸಿರುತ್ತಾಳೆ, ಚಿತ್ರಕಲೆ, ಅಬಾಕಸ್ ಮತ್ತು ಕೀಬೋರ್ಡ್ ವಾದನದಲ್ಲೂ ತರಬೇತಿ ಪಡೆದಿದ್ದಾಳೆ, ನೂರಾರು ಕಲಾಪ್ರದರ್ಶನಗಳಲ್ಲಿ ತನ್ನ ಭರತನಾಟ್ಯ ಮತ್ತು ಇತರ ಕಲಾಪ್ರದರ್ಶನ ನೀಡಿ ಜನಮೆಚ್ಚುಗೆ ಗಳಿಸಿರುವ ಈಕೆ ಆರ್ಯಭಟ ಪ್ರಶಸ್ತಿ, ಅರಳು ಮಲ್ಲಿಗೆ ಪ್ರಶಸ್ತಿ, ಚಿತ್ರಕಲಾ ಅಕಾಡಮಿಯ ಪಾರಿತೋಷಕ, ಇನ್ನಿತರ ಅನೇಕ ಪ್ರಶಸ್ತಿ ಪುರಸ್ಕಾರ ಮತ್ತು ಬಹುಮಾನಗಳಿಗೆ ಪಾತ್ರಳಾಗಿದ್ದಾಳೆ.

ನೃತ್ಯರಂಗದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಈ ಅಪ್ರತಿಮ ಕಲಾವಿದೆ ಇನ್ನಷ್ಟು ಸಾಧಿಸುವಂತಾಗಲಿ, ಮತ್ತಷ್ಟು ಕೀರ್ತಿ ಸಂಪಾದಿಸಲಿ ಎಂದು ಭೃಗುವಾಣಿಯ ಹಾರೈಕೆ.

## ಹಂಸಧ್ವನಿ

**ಅಷ್ಟಾಕ್ಷರಿ – ಷೋಡಶ ಸೂತ್ರಗಳು**

F - Fair & Fine
G - Good & Generous
H - Honest & Hygenic
I - Ideal & Intelligence
J - Joy & Justice
K - Ken & Keen
L - Love & Lead
M - Model & Moral

ಹಂದಾಡಿ ಸತ್ಯನಾರಾಯಣರಾವು

# ಪ್ರೀತಿ–ಪ್ರೇಮ–ಪ್ರಣಯ

ಪ್ರೀತಿ ಮತ್ತು ಪ್ರೇಮಕ್ಕೆ ಧರ್ಮ ಅಡ್ಡಿಯಾಗಬೇಕೇ? ಪ್ರೀತಿಸುವುದು ಮತ್ತು ಪ್ರೇಮಿಸುವುದು ವೈಯಕ್ತಿಕ ಸ್ವಾತಂತ್ರ್ಯವಲ್ಲವೇ? ಪ್ರೀತ್ಸೋದು ತಪ್ಪಾ? ನಮ್ಮನ್ನು ಕೇಳುವುದಕ್ಕೆ ನೀವ್ಯಾರು? ಎಂಬ ಇತ್ಯಾದಿ ಕೂಗು ಇತ್ತೀಚಿನ ದಿನಗಳಲ್ಲಿ ಕೇಳಿಬರುತ್ತಿದೆ. ನೈತಿಕ ವಿದ್ಯಾಭ್ಯಾಸ ಮತ್ತು ಉನ್ನತ ಮಟ್ಟದ ಶಿಕ್ಷಣದ ಕೊರತೆಯಿಂದಾಗಿ ವಿದ್ಯೆಯೆಂಬುದು ನೈವೇದ್ಯವಾಗಿ, ಇಂದಿನ ಯುವ ಜನತೆಯು ದುರ್ನಡತೆ ಮತ್ತು ಅಮಾನವೀಯತೆಯಿಂದ ನಡೆಯುವಂತಾಗಿ, ದೇಶದ ನೈತಿಕ ವಾತಾವರಣ ಕುಲಗೆಟ್ಟು, ದೇಶದಲ್ಲಿ ಎಲ್ಲಾ ರೀತಿಯ ಅರಾಜಕತೆ ತಾಂಡವವಾಡುತ್ತಿದೆ. ಇದು ಪ್ರಸ್ತುತ 'ಲೌವ್ ಜಿಹಾದ್'ವರೆಗೆ ಹೋಗಿ ಮುಟ್ಟಿದೆ. ಈ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಮತ್ತು ಮರುಕಳಿಸದಂತೆ ಮಾಡುವಲ್ಲಿ ನಾವೆಲ್ಲರೂ ವಿಫಲರಾಗಿದ್ದೇವೆ.

ಮೊದಲು ಜನ್ಮ ಕೊಟ್ಟ ತಂದೆ–ತಾಯಿಯರನ್ನು, ನಿಮ್ಮ ಸಹೋದರ–ಸಹೋದರಿಯರನ್ನು ಪ್ರೀತಿಸಿ. ಇದು ಪ್ರೀತಿ ಮತ್ತು ಪ್ರೇಮದ ನಿಜವಾದ ಅರ್ಥ. ಹದಿಹರೆಯದ ವಯಸ್ಸಿನಲ್ಲಿ ಅನ್ಯಲಿಂಗದವರೊಂದಿಗೆ ಒಡನಾಟ ಮತ್ತು ಸ್ನೇಹ ಕಾಮಾತುರತೆಯ ಮತ್ತು ಕಾಮೋದ್ರೇಕದ ಸಹಜವಾದ ಲಕ್ಷಣ. ಇದು ಪ್ರೀತಿ ಮತ್ತು ಪ್ರೇಮವಲ್ಲ, ಇದು ಬರೀ ಕಾಮ, ಇದು ಎಂದೆಂದಿಗೂ ಸತ್ಯ. ನಮ್ಮ ಸಮಾಜವು ಯುವಕ–ಯುವತಿಯರಲ್ಲಿ ಈ ಜಾಗೃತಿ ಮೂಡಿಸಬೇಕು.

ಪ್ರಾಣಿ ಸಹಜವಾದ, ಪ್ರಾಯಕ್ಕನುಗುಣವಾದ ಕಾಮೋದ್ರೇಕವೇ ಪ್ರೀತಿ ಮತ್ತು ಪ್ರೇಮಕ್ಕೆ ಕಾರಣವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಪೆಟ್ರೋಲಿಯಂ ಪದಾರ್ಥಗಳು ಕಿಡಿ ಮಾತ್ರ ಬೆಂಕಿಯಿಂದ ಕ್ಷಣ ಮಾತ್ರದಲ್ಲೇ ಜ್ವಾಲೆಯನ್ನು ಹತ್ತಿಸುವಂತೆ, ಈ ಅಪ್ರಾಪ್ತ ವಯಸ್ಸಿನವರು ಕಾಮವೆಂಬ ಬೆಂಕಿಯಲ್ಲಿ ಸುಟ್ಟು ಭಸ್ಮವಾಗುತ್ತಿದ್ದಾರೆ. ಆದರೆ ಎಲ್ಲಾ ಮಾಧ್ಯಮಗಳು ಮತ್ತು ರಾಜಕಾರಣಿಗಳು ಅವರದೇ ಆದ ಹೊಸ ವ್ಯಾಖ್ಯಾನಗಳ ಮೂಲಕ ಪ್ರೀತಿ ಮತ್ತು ಪ್ರೇಮವನ್ನು ತಪ್ಪಾಗಿ ಅರ್ಥೈಸಿ ಅಪ್ರಾಪ್ತರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ.

ಪ್ರಕೃತಿಸಹಜ ನಿಯಮದಂತೆ ಪ್ರಾಪ್ತ ವಯಸ್ಸಿನಲ್ಲಿ ಮದುವೆಯಾಗುವ ಸ್ವಾತಂತ್ರ್ಯಕ್ಕೆ ವಯೋಮಿತಿ ನಿರ್ಧರಿಸಿ, ಕಾನೂನುರೀತಿ ಅಪರಾಧವೆಂದು ಪರಿಗಣಿಸುವುದು ಈ ದುರಾವಸ್ಥೆಗೆ ಒಂದು ಕಾರಣವೆಂದು ಹೇಳಬಹುದು.

ಅಪ್ರಾಪ್ತರಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ಧನ ಸಂಪಾದನೆಯ ಮಾರ್ಗ ಒಂದೇ ಧ್ಯೇಯ ಎಂದು ಬಿಂಬಿಸುವ ಈ ಕಲುಷಿತ ವಾತಾವರಣದಿಂದ ಮತ್ತು ಡೋಂಗಿ ಜಾತ್ಯಾತೀತ ವಾದಗಳಿಂದ ನಾವು ಹೊರಗೆ ಬರಬೇಕಾಗಿದೆ.

ನಮ್ಮ ದೇಶದ ಎಲ್ಲಾ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಗಮನಿಸಿ ಪುನರುಜ್ಜೀವನಗೊಳಿಸಿದಲ್ಲಿ ಮಾತ್ರ ಈ ಗೊಂದಲ, ಕೊಲೆ, ಅನಾಚಾರ, ಅತ್ಯಾಚಾರಗಳಿಂದ ದೇಶವು ಮುಕ್ತವಾಗುವುದು. ಇದನ್ನು ಸರಕಾರ ಮತ್ತು ಎಲ್ಲಾ ಮಾಧ್ಯಮಗಳು ಅರಿತು ಜವಾಬ್ದಾರಿಯುತವಾಗಿ ವರ್ತಿಸಬೇಕೆಂದು ಸವಿನಯ ಪ್ರಾರ್ಥನೆ.

**– ಚಿಂತಕ**

## ಫಾರಂ 4 (ನಿಯಮ 8 ರಂತೆ)

**ಭೃಗುವಾಣಿ ಕನ್ನಡ ತ್ರೈಮಾಸಿಕ ಪತ್ರಿಕೆಯ ಮಾಲಿಕತ್ವ ಮತ್ತು ಇತರ ವಿವರಗಳು**

| | | |
|---|---|---|
| ಪ್ರಕಟಣೆಯ ಸ್ಥಳ | : | ಹೋಟೆಲ್ ಅಜಂತಾ ಆವರಣ 22ಎ. ಎಂ.ಜಿ.ರಸ್ತೆ, ಬೆಂಗಳೂರು–1 |
| ಪ್ರಕಟಣೆಯ ಅವಧಿ | : | ಮೂರು ತಿಂಗಳಿಗೊಮ್ಮೆ |
| ಮುದ್ರಕರು | : | ಪಿ.ಎಸ್. ವೆಂಕಟೇಶ್ ಬಾಬು ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಬೆಂಗಳೂರು – 02 |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಹೊಸ ತರಗುಪೇಟೆ, ಬೆಂಗಳೂರು – 02 |
| ಪ್ರಕಾಶಕರು | : | ಶ್ರೀಮತಿ ಗೀತಾ ವಾಸುದೇವ ರಾವ್ |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಅಧ್ಯಕ್ಷರು, ಆನಂದ ಬಳಗ, 22ಎ ಎಂ.ಜಿ. ರಸ್ತೆ ಬೆಂಗಳೂರು – 01 |

ನಾನು, ಶ್ರೀಮತಿ ಗೀತಾ ವಾಸುದೇವ ರಾವ್, ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸಂಪೂರ್ಣ ಸತ್ಯವಾಗಿದೆ.

ಬೆಂಗಳೂರು ಸಹಿ/–

**20.3.2018** **(ಗೀತಾ ವಾಸುದೇವ ರಾವ್)**

# ಶ್ರೀ ಪುತ್ತಿಗೆ ವಿದ್ಯಾಪೀಠದಲ್ಲಿ ವೈದಿಕ ಮತ್ತು ಲೌಕಿಕ ಶಿಕ್ಷಣ

ಶ್ರೀ ಪುತ್ತಿಗೆ ಮಠಾಧೀಶರಾದ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಆದೇಶ ಮತ್ತು ಅಪೇಕ್ಷೆಯಂತೆ ಹಿರಿಯಡ್ಕದಲ್ಲಿರುವ ಶ್ರೀ ಪುತ್ತಿಗೆ ಸಂಸ್ಕೃತ ವಿದ್ಯಾಪೀಠ ಮತ್ತು ಶ್ರೀ ಪುತ್ತಿಗೆ ಇಂಗ್ಲಿಷ್ ಶಾಲೆಯಲ್ಲಿ ವೈದಿಕ ಮತ್ತು ಲೌಕಿಕ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಅವಕಾಶವನ್ನು ಸದುಪಯೋಗಪಡಿಸಲು ಇಚ್ಛಿಸುವ ಆಸಕ್ತ ವಿದ್ಯಾರ್ಥಿಗಳಿಂದ ಈ ಶೈಕ್ಷಣಿಕ ವರ್ಷಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಶ್ರೀ ಪುತ್ತಿಗೆ ವಿದ್ಯಾಪೀಠವು ಕಳೆದ 32 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಪೌರೋಹಿತ್ಯ, ವೇದ, ಆಗಮ, ಜ್ಯೋತಿಷ್ಯ ಮತ್ತು ಅಲಂಕಾರ ಶಾಸ್ತ್ರ, ವೇದಾಂತದ ಜೊತೆಗೆ ಈ ಶೈಕ್ಷಣಿಕ ವರ್ಷದಿಂದ ಇಂಗ್ಲಿಷ್ ಮತ್ತು ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ನೂರಾರು ಪುರೋಹಿತರು ಮತ್ತು ಪಂಡಿತರನ್ನು ಸಮಾಜಕ್ಕೆ ನೀಡಿದ ಈ ಶಿಕ್ಷಣ ಸಂಸ್ಥೆಗೆ ಸೇರಲು ಉಪನಯನವಾದ ಹಾಗೂ ಕನ್ನಡ / ಇಂಗ್ಲಿಷ್ ಮಾಧ್ಯಮದಲ್ಲಿ 4ನೇ ತರಗತಿ ತೇರ್ಗಡೆಯಾದ ವಿದ್ಯಾರ್ಥಿಗಳು ಅರ್ಹರಾಗುತ್ತಾರೆ. ಇಲ್ಲಿ ಶಿಕ್ಷಣ ಪಡೆದವರಿಗೆ ಪಿ.ಯು.ಸಿ. / ಪದವಿ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಸಾಹಿತ್ಯ / ವಿದ್ವತ್‌ನಲ್ಲಿ ಎಂ.ಎ. ಪದವಿ ಪಡೆಯುವ ಅವಕಾಶವನ್ನು ಕಲ್ಪಸಲಾಗಿದೆ.

ಪ್ರಶಾಂತ ಹಾಗೂ ಅತ್ಯಂತ ಯೋಗ್ಯ ಪರಿಸರದಲ್ಲಿ ಶಿಕ್ಷಣವನ್ನು ಪಡೆಯಲು ಆಸಕ್ತಿ ಉಳ್ಳವರು ಈ ಕೆಳಗಿನವರನ್ನು ಸಂಪರ್ಕಿಸಿ. ಹೆಚ್ಚಿನ ವಿವರವನ್ನು ಪಡೆಯಲು ಕೋರಲಾಗಿದೆ :

**ಕಾರ್ಯದರ್ಶಿ, ಶ್ರೀ ಪುತ್ತಿಗೆ ಸಂಸ್ಕೃತ ವಿದ್ಯಾಪೀಠ**
ಶ್ರೀ ಪುತ್ತಿಗೆ ಮಠ, ಹಿರಿಯಡ್ಕ, ಉಡುಪಿ – 576 113
ದೂ.: 0820 – 2534064 / 2524154
ಮೊ: 8971797631 / 9663810618
ಇ-ಮೇಲ್: shreeputhigevidyapeetha@gmail.com

# ಆನಂದ ಬಳಗದ ಕಚೇರಿ ಸ್ಥಳಾಂತರ

ಆನಂದ ಬಳಗವು ಕಳೆದ ಹಲವಾರು ವರ್ಷಗಳಿಂದ ಕುಮಾರಪಾರ್ಕ್ (ಪೂರ್ವ) ದಲ್ಲಿರುವ ಜೀವನ್ ಬಿಲ್ಡಿಂಗ್ಸ್‌ನ ಮೂರನೇ ಮಹಡಿಯಲ್ಲಿ ತನ್ನ ಕಚೇರಿಯನ್ನು ಹೊಂದಿದ್ದು, ದಿನಾಂಕ 1.4.2018 ರಿಂದ ಬಳಗದ ಕಚೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ:

**ಆನಂದ ಬಳಗ (ರಿ.)**
ಹೋಟೆಲ್ ಅಜಂತಾ ಆವರಣ, 22ಎ, ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು – 560 001. (ದೂರವಾಣಿ: 080-25594457).

ಕಳೆದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಬಳಗದ ಕಚೇರಿಯ ಕಾರ್ಯನಿರ್ವಹಣೆಗೆ ತಮ್ಮ ಕಚೇರಿಯಲ್ಲಿ ಅಥವಾ ಅದೇ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಟ್ಟಿರುವ ಖ್ಯಾತ ಲೆಕ್ಕ ಪರಿಶೋಧಕರಾದ ಶರತ್ ಮತ್ತು ಕೋ ಸಂಸ್ಥೆಯ ಉದಾರತೆಯನ್ನು, ಈ ಸಂದರ್ಭದಲ್ಲಿ ಸ್ಮರಿಸಲೇಬೇಕು. ಇದೀಗ ಆ ಸಂಸ್ಥೆ ತಮ್ಮ ಕಚೇರಿಯನ್ನು ಸ್ಥಳಾಂತರಿಸಿರುವ ಕಾರಣ ಬಳಗದ ಕಚೇರಿಯನ್ನು ಅನಿವಾರ್ಯವಾಗಿ ಬದಲಿಸಲಾಗಿದೆ. ಬಳಗದ ಸದಸ್ಯರು ದಯವಿಟ್ಟು ಕಚೇರಿ ಸ್ಥಳಾಂತರದ ವಿಚಾರವನ್ನು ಗಮನಿಸಿ, ಹೊಸ ಕಚೇರಿಯ ವಿಳಾಸಕ್ಕೆ ಪತ್ರ, ವ್ಯವಹಾರವನ್ನು ಮಾಡಬೇಕಾಗಿ ವಿನಂತಿ.

**ಕಾರ್ಯದರ್ಶಿ, ಆನಂದಬಳಗ**

# ಶ್ರೀ ಶ್ರೀ ವಿದ್ಯಾಪೂರ್ಣ ತೀರ್ಥ ಶ್ರೀಪಾದರ ಆರಾಧನಾ ಮಹೋತ್ಸವ

ದಿನಾಂಕ 1.4.2018ರ ಭಾನುವಾರ ಉಡುಪಿಯ ಶ್ರೀ ಕೃಷ್ಣಾಪುರ ಮಠದ ಪರಂಪರೆಯಲ್ಲಿ 32ನೆಯ ಮಠಾಧಿಪತಿಗಳಾಗಿ ರಾರಾಜಿಸಿದ್ದ ಶ್ರೀ ಶ್ರೀ ವಿದ್ಯಾಪೂರ್ಣ ತೀರ್ಥರ 83ನೆಯ ಆರಾಧನಾ ಮಹೋತ್ಸವವನ್ನು ಶ್ರೀ ಕೃಷ್ಣಪ್ರಜ್ಞಾ ಪ್ರತಿಷ್ಠಾನದ ವತಿಯಿಂದ ಉಡುಪಿ ಮತ್ತು ಬೆಂಗಳೂರಿನ ಸಂಸ್ಥೆಯ ಸಭಾಂಗಣಗಳಲ್ಲಿ ವಿಜೃಂಭಣೆ ಯಿಂದ ಆಚರಿಸಲಾಯಿತು.

ಪ್ರಸಕ್ತ ಪೀಠಾಧಿಪತಿಗಳಾದ ಶ್ರೀ ಶ್ರೀ ವಿದ್ಯಾಸಾಗರ ತೀರ್ಥರ ಪರಮ ಗುರುಗಳಾದ ಶ್ರೀ ಶ್ರೀ ವಿದ್ಯಾಪೂರ್ಣ ತೀರ್ಥರು ಪುತ್ತಿಗೆ ಮಠದ ಶತಾಯುಷಿ ಹಾಗೂ ಮಹಾ ತಪಸ್ವಿಗಳಾದ ಶ್ರೀ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವ ರಿಂದ ಶಾ. ಶಕ 1881ರ ವಿಕ್ರಮ ಸಂವತ್ಸರದ ಶ್ರಾವಣ ಶುದ್ಧ ಬಿದಿಗೆಯಂದು ಬೆಂಗಳೂರಿನಲ್ಲಿ ಸನ್ಯಾಸ ದೀಕ್ಷೆಯನ್ನು ಪಡೆದರು. ಉಡುಪಿಯ ಅಷ್ಟಮಠಗಳ ಪರಂಪರೆಯಲ್ಲಿ ಪೀಠಾಧಿಪತಿಗಳಾಗಿ ಯತಿಧರ್ಮಕ್ಕೆ ಚ್ಯುತಿ ಬಾರದಂತೆ ಶ್ರೀಮಠದ ಘನತೆ ಗೌರವ ಮತ್ತು ಸಂಪ್ರದಾಯಗಳನ್ನು ವೈಭವೋಪೇತವಾಗಿ ಪರಿಪಾಲಿಸಿದವರಲ್ಲಿ, ಶ್ರೀ ಶ್ರೀ ವಿದ್ಯಾಪೂರ್ಣ ತೀರ್ಥರು ಒಬ್ಬರು. ಶ್ರೀ ಮಧ್ವಕರಾರ್ಚಿತ ಕಾಳೀಯಮರ್ದನ ಶ್ರೀ ಕೃಷ್ಣ ಪಾದಪದ್ಮಗಳಲ್ಲಿ ನೆಟ್ಟ ಮನಸ್ಸುಳ್ಳ ಜ್ಞಾನಿವರೇಣ್ಯರು ಅನೇಕ ವಿದ್ವಾಂಸರಲ್ಲಿ ಗಾಢವಾದ ಅಧ್ಯಯನ ನಡೆಸಿದ ಶ್ರೇಷ್ಠರು. ಇವರ ಕಾಲದಲ್ಲಿ ಅಭಿವೃದ್ಧಿಗೊಂಡ ಮಠದ ಸಂಪತ್ತು ಜ್ಞಾನಕಾರ್ಯ ಮತ್ತು ದಾನ ಕಾರ್ಯಗಳಿಗೆ ವಿನಿಯೋಗಿಸಲ್ಪಟ್ಟಿತ್ತು. ಶ್ರೀದೇವರ ನೈವೇದ್ಯಕ್ಕೆಂದೇ ತಯಾರಿಸಲ್ಪಟ್ಟ ವಿವಿಧ ಭಕ್ಷಭೋಜ್ಯಗಳ ಸಂಭ್ರಮವೇ ಸಂಭ್ರಮ. ಅತಿಥಿ ಸತ್ಕಾರ ಹಾಗೂ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ತಮ್ಮ ಮಠದ ಶಾಖಾ ಮಠಗಳಿರುವ ಕೃಷ್ಣಾಪುರ, ದಂಡತೀರ್ಥ, ನೇರಂಬಳ್ಳಿ ಯಂತಹ ಸ್ಥಳಗಳಲ್ಲಿ ಅನ್ನದಾನ ಹಾಗೂ ವಸತಿ ಸೌಕರ್ಯಗಳಿಗೆ ಏರ್ಪಾಡು ಮಾಡಿದ್ದರು. ಬಡವ ಬಲ್ಲಿದರೆಂಬ ಭೇದವಿಲ್ಲದೆ ಅನೇಕ ಸಂಸಾರಗಳ ಪೋಷಣೆಯ ಜವಾಬ್ದಾರಿಯನ್ನು ವಹಿಸಿದ್ದರು. ಮಠಾಧಿಪತಿಗಳ ಗಾಂಭೀರ್ಯಕ್ಕನುಗುಣವಾಗಿ ಪೇಟ, ದೀವಟಿಗೆ, ಪೋಷಾಕುಯುಕ್ತ ಪೇದೆಗಳು, ವಿದ್ವಾಂಸರ ತಂಡವಿಲ್ಲದೆ ಮಠದ ಹೊರಗೆ ಬರುತ್ತಿರಲಿಲ್ಲ, ಕಲಾಪೋಷಕರಾಗಿ, ವಿದ್ಯಾಪೋಷಕರಾಗಿ ಅನೇಕ ಪರಿಣತರನ್ನು ಪೋಷಿಸಿದ್ದರು. ಮೂರು ಭಾರಿ ಪರ್ಯಾಯ ಪೀಠವನ್ನೇರಿದ ಶ್ರೀಗಳವರು ಶ್ರೀಕೃಷ್ಣ ಮಠದ ಸಿಂಹಾಸನ, ಸೂರ್ಯಶಾಲೆ, ಚಂದ್ರಶಾಲೆ, ಹೊರಬದಿಯ ಗೋಪುರ, ಕಟ್ಟಾಂಜರಗಳ ನವೀಕರಣ ಹಾಗೂ ಗರ್ಭಗುಡಿಯ ಮೇಲ್ಭಾಗದಲ್ಲಿ ರಾರಾಜಿ ಸುತ್ತಿರುವ ದಶಾವತಾರಗಳ ಪ್ರತಿಮೆಗಳ ನಿರ್ಮಾಣಗಳಿಗೆ ಕಾರಣೀಭೂತರಾದರು.

ಶ್ರೀಕೃಷ್ಣನಿಗೆ ಸ್ವರ್ಣಪಾಲಕಿಯನ್ನು ನಿರ್ಮಿಸಿ, ಸಮರ್ಪಿಸಿದ ಕೀರ್ತಿ ಶ್ರೀಗಳವರದು. ಇಂದಿಗೂ ಶ್ರೀಕೃಷ್ಣನ ಸೇವೆಗೆ ಉಪಯೋಗಿಸಲ್ಪಡುವ ಈ ಪಲ್ಲಕ್ಕಿಯ ನಿರ್ಮಾಣ ಕಾರ್ಯದಲ್ಲಿ ಶ್ರೀಗಳವರ ವೈಯಕ್ತಿಕ ಪಾತ್ರ, ಅತೀ ಸೂಕ್ಷ್ಮವಿಚಾರಗಳಲ್ಲೂ ಶ್ರೀಗಳವರ ಸಲಹೆ ಸೂಚನೆಗಳು ಗಮನಾರ್ಹ. ಇದರಿಂದಾಗಿ ಪಲ್ಲಕ್ಕಿಯ ನಿರ್ಮಾಣ ಕಾರ್ಯ 5 ವರ್ಷಗಳ ಕಾಲ ನಡೆಯಿತು.

ಚೌಕಿಯ ಕಟ್ಟಡ ನಿರ್ಮಾಣ ಕಾರ್ಯ ತಾಂತ್ರಿಕ ಕಾರಣಗಳಿಂದಾಗಿ ಅಪೂರ್ಣಗೊಂಡಾಗ, ಅದಕ್ಕೆ ಸಂಬಂದಿಸಿದ ಬಾವಿಯನ್ನು ಕಟ್ಟುವುದು ಅಸಾಧ್ಯವೆಂದು ಪರಿಣತರು ಅಭಿಪ್ರಾಯಪಟ್ಟಾಗ ಶ್ರೀಮುಖ್ಯಪ್ರಾಣದೇವರು ಶ್ರೀಗಳವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಶ್ರೀಗಳವರಿಗೆ ಅಭಯವನ್ನಿತ್ತು ಕಾರ್ಯ ಮುಂದುವರಿಸುವಂತೆ ತಿಳಿಸಿ ಅದರಂತೆ ಆ ಕಾರ್ಯಗಳು ನಿರ್ವಿಘ್ನದಿಂದ ಸಂಪೂರ್ಣ ಗೊಂಡದ್ದು ಶ್ರೀಗಳವರ ತಪಸ್ಸಿಗೊಂದು ಉದಾಹರಣೆ. ಆ ಕಾಲದಲ್ಲಿ ಹನ್ನೊಂದು ಆನೆಗಳನ್ನು ಹೊಂದಿದ್ದ ಅಷ್ಟಮಠಗಳಲ್ಲಿ ಮೂರು ಆನೆಗಳು ಶ್ರೀಕೃಷ್ಣಾಪುರ ಮಠದ ಸುಪರ್ದಿಯಲ್ಲಿದ್ದವು.

1935ನೆ ಇಸವಿಯ ಪಾಲ್ಗುಣಮಾಸದ ಕೃಷ್ಣಪಕ್ಷ ಪಾಡ್ಯದಂದು ಶ್ರೀಕೃಷ್ಣಾ ಪೂಜಾ ಕಾರ್ಯವನ್ನು ಪೂರೈಸಿ ಅನ್ನದಾನವೇ ಮುಂತಾದ ದಾನಾದಿಗಳನ್ನು ಮುಗಿಸಿದ ಬಳಿಕ ಸುಮಾರು ಒಂದು ಗಂಟೆಯ ಸಮಯದಲ್ಲಿ ಶ್ರೀಗಳವರು ಹರಿಪದವನ್ನು ಸೇರಿದರು ಇವರ ವೃಂದಾವನವು ಉಡುಪಿಯಲ್ಲಿ ಇಂದಿಗೂ ರಾರಾಜಿಸುತ್ತವೆ.

ಇಂತಹ ಮಹಾತ್ಮರ ಬದುಕಿನ ಬಗ್ಗೆ ಅರಿತುಕೊಳ್ಳುವ ಅವಕಾಶವನ್ನು ಇಂದಿನ ಜನತೆಗೆ ಒದಗಿಸಿದ ಶ್ರೀಕೃಷ್ಣ ಪ್ರಜ್ಞಾ ಪ್ರತಿಷ್ಠಾನಕ್ಕೆ ಧನ್ಯವಾದಗಳು.

ಆರಾಧನಾ ಕಾರ್ಯಕ್ರಮದ ಅಂಗವಾಗಿ 70ಕ್ಕೂ ಹೆಚ್ಚಿನ ವಿದ್ವಾಂಸರಿಂದ ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಪ್ರವಚನ, ಗುರುವಂದನೆ, ಶ್ರೀಕೃಷ್ಣ ಮಧ್ವ ಗುರುಗಳಿಗೆ ಮಹಾ ಮಂಗಳಾರತಿ, ಪಾದ್ಯ ಸಮರ್ಪಣೆ ನಡೆದು ಆಗಮಿಸಿದ ಅತಿಥಿಗಳಿಗೆ, ವಿದ್ವಾಂಸರುಗಳಿಗೆ ತೀರ್ಥಪ್ರಸಾದ, ಭೋಜನ, ಫಲತಾಂಬೂಲ, ವಸ್ತ್ರದಾನಗಳು ನಡೆದುವು.


ಭಕ್ತವೃಂದಕ್ಕೆ ಈ ಅಪೂರ್ವ ಅವಕಾಶ ಒದಗಿಸಿದ ಕುಂಜಿಬೆಟ್ಟು ಶ್ರೀವೇದವ್ಯಾಸ ಆಚಾರ್ಯರಿಗೆ ನಮ್ಮೆಲ್ಲರ ಹೃತ್ಪೂರ್ವಕ ನಮನಗಳು.

**– ಎಸ್. ಹರಿದಾಸ ಉಪಾಧ್ಯ**

# ವ್ಯಾಸರ ಜನ್ಮ ವೃತ್ತಾಂತ

ಶ್ರೀಮನ್ಮಹಾಭಾರತ, ಶ್ರೀ ಮದ್ಭಾಗವತ, ಹರಿವಂಶ, ಬ್ರಹ್ಮಸೂತ್ರ, ಅಷ್ಟಾದಶ ಪುರಾಣಗಳನ್ನು ರಚಿಸಿದ ಮಹರ್ಷಿ ವ್ಯಾಸರನ್ನು

**"ವ್ಯಾಸಂ ವಸಿಷ್ಠನಪ್ತಾರಂ ಶಕ್ತೇ ಪೌತ್ರಮಕಲ್ಮಷಮ್ ।**
**ಪರಾಶರಾತ್ಮಜಂ ವಂದೇ ಶುಕತಾತಂ ತಪೋ ನಿಧಿಮ್ ॥**



ಎಂದು ಪ್ರಾರ್ಥಿಸುತ್ತೇವೆ. ಇವರು ವಸಿಷ್ಠರ ಮರಿಮಗ, ಶಕ್ತಿಯ ಮೊಮ್ಮಗ, ಪರಾಶರರ ಮಗ ಎಂದು ನಮಗೆಲ್ಲಾ ಗೊತ್ತು. ಈ ಮಹಾತ್ಮರಿಗೆ ಜನ್ಮ ನೀಡಿದ ಮಹಾಮಾತೆ ಒಬ್ಬ ಸಾಮಾನ್ಯ ಬೆಸ್ತರವಳು ಎಂದು ಸಾಮಾನ್ಯರಿಗೂ ಗೊತ್ತು ಆದರೆ ಯಾರಿವಳು ಎಂದು ತಿಳಿಯಲು ಹೊರಟಾಗ :-

ಯಮುನಾ ನದಿ ತೀರದಲ್ಲಿ 'ಉಪರಿಚರ' ಎಂಬ ರಾಜನಿದ್ದ. ಸುಂದರಿಯಾದ ಅರಸಿಯೊಡನೆ ದಾಂಪತ್ಯ ಜೀವನ ಹಾಲು ಜೇನಿನಂತೆ ಇದ್ದರೂ ಇವರಿಗೆ ಮಕ್ಕಳಿರಲಿಲ್ಲ. ಒಮ್ಮೆ ಮಹಾರಾಜನು ಬೇಟೆಗಾಗಿ ಕಾಡಿಗೆ ಹೋದಾಗ ಆಶ್ರಮವಾಸಿಯಾದ ಅದ್ರಿಕೆಯ ಭೇಟಿ ಆಯ್ತು. ಇವಳನ್ನು ಗಿರಿಜೆ ಎಂದೂ ಕರೆಯುತ್ತಿದ್ದರು. ಪ್ರಥಮ ದರ್ಶನದಲ್ಲೇ ಅದ್ರಿಕೆಯಲ್ಲಿ ಮೋಹಿತನಾದ. ಮಹಾರಾಜನಲ್ಲವೇ ಅವಳ ಒಪ್ಪಿಗೆ ಪಡೆದು ಗಾಂಧರ್ವ ವಿವಾಹ ಮಾಡಿಕೊಂಡನು. ಕೆಲದಿನಗಳು ಅಲ್ಲಿಯೇ ಅವಳ ಜೊತೆ ವಿಹಾರದಲ್ಲಿದ್ದು ಸಂತೋಷದಿಂದ ಕಾಲಕಳೆದ ಮೇಲೆ ಒಂದು ದಿನ ಅದ್ರಿಕೆಯನ್ನು ತನ್ನ ಅರಮನೆಗೆ ಹೋಗೋಣವೆಂದು ಆಹ್ವಾನಿಸಿದ. ತಾನು ಗರ್ಭಿಣಿಯಾದ ವಿಷಯ ತಿಳಿಸಿ, ಈಗಾಗಲೇ ಬರುವುದಿಲ್ಲವೆಂದು ಹಠ ಹಿಡಿದಳು. ಸರಿ, ನಿನಗಿಷ್ಟ ಬಂದಾಗ ಬಾ! ಎಂದು ಹೇಳಿ ಗುರುತಿಗಾಗಿ ತನ್ನ ಉಂಗುರವನ್ನು ಅವಳಿಗೆ ಕೊಟ್ಟು ತಾನು ಅರಮನೆಗೆ ಹಿಂದಿರುಗಿದನು.

ಕಾಲಾನುಕ್ರಮದಲ್ಲಿ ಅದ್ರಿಕೆಯು ಬೆಸ್ತರ ಯಜಮಾನನ ಮನೆಯಲ್ಲಿ ಅವಳಿ-ಜವಳಿ (ಗಂಡು-ಹೆಣ್ಣು) ಮಕ್ಕಳಿಗೆ ಜನ್ಮ ನೀಡಿದಳು. ಮಹಾರಾಜನು ತನಗೆ ಕೊಟ್ಟ ಉಂಗುರವನ್ನು ಆ ಬೆಸ್ತ ದಂಪತಿಗಳಿಗೆ ಕೊಟ್ಟು ಇಹಲೋಕ ತೊರೆದಳು. ಬೆಸ್ತ ದಂಪತಿಗಳು ಉಪರಿಚರ ಮಹಾರಾಜನ ಬಳಿಗೆ ಹೋಗಿ ತನ್ನ ಮನೆಯಲ್ಲಿ ನಡೆದ ವಿಷಯಗಳನ್ನೆಲ್ಲಾ ತಿಳಿಸಿ, ಎರಡು ಮಕ್ಕಳನ್ನು ಒಪ್ಪಿಸಿ, ಮಹಾರಾಜನು ನೀಡಿದ ಉಂಗುರವನ್ನು ಕೊಟ್ಟರು.

ರಾಜನಿಗೆ ಉಂಗುರವನ್ನು ನೋಡಿದ ಕೂಡಲೇ ಎಲ್ಲವೂ ನೆನಪಿಗೆ ಬಂದರೂ ತನ್ನ ರಾಣಿಗೆ ಏನೂ ತಿಳಿಸಲಿಲ್ಲ. ಮಕ್ಕಳೇ ಇಲ್ಲದ ರಾಣಿಯು ಗಂಡು ಮಗುವನ್ನು ನೋಡಿ ಸಂತೋಷ ಪಟ್ಟಳು. ಮಹಾರಾಜನು ಇಬ್ಬರು ಮಕ್ಕಳಿಗೂ ನಾಮಕರಣ ಮಾಡಿದನು. ಮಕ್ಕಳಲ್ಲಿ ಮೀನಿನ ವಾಸನೆ ಇದ್ದುದರಿಂದ ಗಂಡು ಮಗುವಿಗೆ 'ಮತ್ಸ್ಯಗಂಧ' ಎಂದೂ ಹೆಣ್ಣು ಮಗುವಿಗೆ 'ಮತ್ಸ್ಯಗಂಧಿ' ಎಂದೂ ಹೆಸರಿಟ್ಟರು.

ಬೆಸ್ತ ದಂಪತಿಗಳಿಗೂ ಮಕ್ಕಳಿರಲಿಲ್ಲ. ಮಹಾರಾಜ ರಾಣಿಯರಲ್ಲಿ ಬೇಡಿಕೊಂಡರು. ಮಹಾರಾಜನು ಕರುಣೆಯಿಂದ ಒಪ್ಪಿ ಹೆಣ್ಣು ಮಗುವನ್ನು ಆ ದಂಪತಿಗಳಿಗೆ ಕೊಟ್ಟು, ತಾಯಿಯ ಉಂಗುರ ಮಗಳಿಗೇ ಸೇರಲಿ ಎಂದು ಉಂಗುರವನ್ನು ಆ ದಂಪತಿಗಳಿಗೇ ಕೊಟ್ಟು, ಅವರಿಗೆ ಬೇಕು ಬೇಕಾದ್ದನ್ನೆಲ್ಲಾ ಕೊಟ್ಟು ಕಳುಹಿಸಿದನು.

ಬೆಸ್ತ ದಂಪತಿಗಳು ತಮ್ಮ ಸ್ಥಳಕ್ಕೆ ತೆರಳಿ ಮನೆಯಲ್ಲಿ ಒಂದು ದೊಡ್ಡ ಹಬ್ಬವನ್ನೇ ಆಚರಿಸಿದರು. ಯಜಮಾನನು ಆಮಗುವಿಗೆ ಸತ್ಯವತಿ ಎಂದು ಹೆಸರಿಟ್ಟನು. ಆದರೆ ಅವನ ಪತ್ನಿ 'ಕಾಳಿ' ಎಂದು ಕರೆಯುತ್ತಿದ್ದಳು. ಸತ್ಯವತಿಯು ಬೆಳೆದು ದೊಡ್ಡವಳಾಗಿ ತಾನೂ ದೋಣಿ ನಡೆಸುವುದನ್ನು ಕಲಿತು ತಂದೆಗೆ ಸಹಾಯಕಳಾದಳು.

ಒಮ್ಮೆ ಮಹಾ ತಪಸ್ವಿಗಳಾದ ಪರಾಶರರು ನದೀ ಸಮೀಪಕ್ಕೆ ಒಂದು ಸತ್ಯವತಿಯನ್ನು ನದಿ ದಾಟಿಸಲು ಕೇಳಿಕೊಂಡರು. ದೋಣಿಯಲ್ಲಿ ಪ್ರಯಾಣಿಸುತ್ತಿರುವಾಗ ಅತಿ ಚೆಲುವೆಯಾದ ಸತ್ಯವತಿಯಲ್ಲಿ ಮೋಹಗೊಂಡರು. ಈ ಶುಭ ಮುಹೂರ್ತದಲ್ಲಿ ಗರ್ಭದಾನ ಮಾಡಲೇಬೇಕೆಂದು ನಿಶ್ಚಯಿಸಿ ಸತ್ಯವತಿಯನ್ನು ಒಪ್ಪಿಸಿ ಅವಳಿಗೆ ಮಂತ್ರಿಸಿದ ಜಲವನ್ನು ಪ್ರೋಕ್ಷಿಸಿ ವಾಸನಾರಹಿತಳನ್ನಾಗಿ ಮಾಡಿದರು, ಒಂದು ದಿನದ ಮಟ್ಟಿಗೆ ಪತ್ನಿಯನ್ನಾಗಿ ಸ್ವೀಕರಿಸಿದರು.

"ನಿನಗೆ ಮಹಾಜ್ಞಾನಿಯೂ ಮಹಾತ್ಮನೂ ಆದ ಒಬ್ಬ ಸುಪುತ್ರನು ಹುಟ್ಟುತ್ತಾನೆ. ನೀನು ಅವನನ್ನು ನನ್ನ ತಾಯಿಯಾದ 'ಅದೃಶ್ಯಂತಿ'ಗೆ ಒಪ್ಪಿಸು - ಅವಳು ಈ ನಿನ್ನ ಮಗುವನ್ನು ಸಾಕಿ ಸಲಹಿ ವಿದ್ಯಾ ಬುದ್ಧಿಯನ್ನು ಕಲಿಸುವಳು" - ಎಂದು ಹೇಳಿ ಗುರುತಿಗಾಗಿ ತನ್ನ ದಂಡ

ಕಮಂಡಲಗಳನ್ನು ಕೊಟ್ಟು, ಸತ್ಯವತಿಗೆ ಮತ್ತೆ 'ಕನ್ಯತ್ವ' ಪ್ರಾಪ್ತಿಯಾಗುವಂತೆ ಮಂತ್ರಿತ ಜಲವನ್ನು ಪ್ರೋಕ್ಷಿಸಿ ಹೊರಟುಹೋದರು.

ಸಕಾಲದಲ್ಲಿ ಸತ್ಯವತಿಯು ಗಂಡುಮಗುವಿಗೆ ಜನ್ಮ ನೀಡಿದಳು. ಪರಾಶರರ ಅಪ್ಪಣೆಯಂತೆ ಬೆಸ್ತರಾಜನು ಮಗುವಿನ ಅಜ್ಜಿಯಾದ ಅದೃಶ್ಯಂತಿಗೆ ಎಲ್ಲಾ ವಿವರವನ್ನು ತಿಳಿಸಿ ಮಗುವನ್ನು ದಂಡಕಮಂಡಲಗಳನ್ನು ಒಪ್ಪಿಸಿ ಹೊರಟು ಹೋದನು.

ಅದೃಶ್ಯಂತಿಯು ಮಗುವನ್ನು ಮುದ್ದಾಗಿ ಸಾಕಿ "ವ್ಯಾಸ" ಎಂದು ನಾಮಕರಣ ಮಾಡಿದಳು. ಮಗುವು ಕಪ್ಪಾಗಿರುವುದರಿಂದ "ಕೃಷ್ಣ" ಎಂದೂ, ದ್ವೀಪದಲ್ಲಿ ಹುಟ್ಟಿದುದರಿಂದ 'ದ್ವೈಪಾಯನ' ಎಂದು ಸೇರಿಸಿ 'ಕೃಷ್ಣದ್ವೈಪಾಯನ' ಎಂದು ಕರೆದಳು.

ಮಹಾಜ್ಞಾನಿಯಾದ ಅದೃಶ್ಯಂತೆಯು ತನ್ನ ಮೊಮ್ಮಗನಿಗೆ ತನ್ನ ಜ್ಞಾನವನ್ನೆಲ್ಲಾ ಧಾರೆ ಎರೆದು 'ಉಪನಯನ' ಮಾಡಿಸಿ ವೇದ ಮಂತ್ರಗಳನ್ನೆಲ್ಲಾ ಕಲಿಸಿದಳು. ನಂತರ ವ್ಯಾಸರು ತನ್ನ ತಂದೆಯ ಶಿಷ್ಯರಾದ ಗೌತಮರನ್ನು ಗುರುವಾಗಿ ಸ್ವೀಕರಿಸಿ ಸಕಲ ಶಾಸ್ತ್ರ ಪಾರಂಗತರಾದರು. ವೇದಗಳನ್ನು ಸಂಗ್ರಹಿಸಿ ನಾಲ್ಕು ಭಾಗ ಮಾಡಿ, ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂದು ಹೆಸರಿಟ್ಟರು. ವೇದವನ್ನು ಭಾಗ ಮಾಡಿದ್ದರಿಂದ "ವೇದವ್ಯಾಸ" ಎನಿಸಿಕೊಂಡರು. ಬದರಿಯಲ್ಲಿ ಕುಳಿತು "ಬ್ರಹ್ಮಸೂತ್ರ"ವನ್ನು ರಚಿಸಿದ್ದರಿಂದ "ಬಾದರಾಯಣ" ಎಂಬ ಬಿರುದನ್ನು ಪಡೆದರು. ಜಾಬಾರಿಯ ಮಗಳಾದ 'ವಟಿ'ಯನ್ನು ವಿವಾಹವಾಗಿ "ಶುಕ" ಎಂಬ ಪುತ್ರರತ್ನನನ್ನು ಪಡೆದರು. ಮುಂದೆ ತಾಯಿ ಸತ್ಯವತಿಯ ಅಣತಿಯ ಮೇರೆಗೆ ಧೃತರಾಷ್ಟ್ರ, ಪಾಂಡು ಮತ್ತು ವಿದುರನನ್ನು ಪಡೆದರು. ನಾಲ್ಕು ಮಕ್ಕಳ ತಂದೆಯಾದ ಮಹರ್ಷಿ ವೇದವ್ಯಾಸ ಸತ್ಯವತಿಯರ ಪೂರ್ವ ಪರಿಚಯವನ್ನು ಇನ್ನೂ ಹೆಚ್ಚು ತಿಳಿಯಲು ನಾಂದಿಯಾಗಲಿ ಎಂದು ಆಶಿಸುತ್ತಾ ....

**"ವ್ಯಾಸಾಯ ವಿಷ್ಣು ರೂಪಾಯ ವ್ಯಾಸ ರೂಪಾಯ ವಿಷ್ಣವೇ ।**
**ನಮೋ ವೈಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥**

**– ಕುಂಜಿತ್ತಾಯ ರಾಘವೇಂದ್ರ ರಾವ್**

***

ಗಮನಿಸಿ

# ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವ – 26.5.2018

ತಿರುಮಲಾಧೀಶ ಶ್ರೀ ವೆಂಕಟೇಶ್ವರನಿಗೆ ನೂರಾರು ಭಜನಾ ಸಂಘಗಳ ಸಮಂಗಲಿಯರ ಭಜನಾ ಸೇವೆಯೊಂದಿಗೆ ವೈಭವದ "ಶ್ರೀನಿವಾಸ ಕಲ್ಯಾಣ ಮಹೋತ್ಸವ"ವನ್ನು ಸಂಯೋಜಿಸಲಾಗಿದೆ.

ದಿನಾಂಕ : **26.5.2018, ಶನಿವಾರ, ಸಂಜೆ 5 ರಿಂದ**

ಸ್ಥಳ : **ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಬಯಲು ರಂಗಮಂದಿರ**
ಡಾ: ವಿಶ್ವೇಶತೀರ್ಥ ಸಾಮೀಜಿ ಮಾರ್ಗ, ಬನಶಂಕರಿ 3ನೇ ಹಂತ, ಬೆಂಗಳೂರು – 560 028

ದಿವ್ಯ ಉಪಸ್ಥಿತಿ ಮತ್ತು ಅನುಗ್ರಹ ಸಂದೇಶ :
**ಶ್ರೀ ಪೇಜಾವರ ಮಠದ ಕಿರಿಯ ಮಠಾಧೀಶರಾದ**
**ಪೂಜ್ಯ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು ಮತ್ತು**
**ಪೂಜ್ಯ ಶ್ರೀ ಶ್ರೀ ಸುವಿದ್ಯೇಂದ್ರ ತೀರ್ಥ ಶ್ರೀಪಾದರು**

ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಭಗವಂತನ ಅನುಗ್ರಹ ಮತ್ತು ಪೂಜ್ಯ ಶ್ರೀಪಾದರ ಆಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಕೋರಿಕೆ

ಸಂಯೋಜನೆ : ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಸಮಿತಿ, ಬೆಂಗಳೂರು – 560 028
ಸಹಯೋಗ : ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ, ಆನಂದ ಬಳಗ ಮತ್ತಿತರ ಸಂಘ – ಸಂಸ್ಥೆಗಳು


# ಸುದ್ಧಿ ಸಂಗ್ರಹ

## ❑ ಕಲಾಂ ಜೀವನ ಧರ್ಮ ಪುಸ್ತಕ ಬಿಡುಗಡೆ



ನಮ್ಮ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಜಯಪ್ರಕಾಶ್‌ರಾವ್ .ಕೆ ಅವರು ಬರೆದಿರುವ "ಕಲಾಂ ಜೀವನ ಧರ್ಮ" ಎಂಬ ಪುಸ್ತಕ ದಿ. 29.3.2018 ರಂದು ಮೈಸೂರಿನಲ್ಲಿ ಬಿಡುಗಡೆಯಾಗಿದೆ. ನಗರದ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು ನಗರ ಪೋಲಿಸ್ ಕಮಿಷನರ್ ಆಗಿರುವ ಡಾ. ಎ. ಸುಬ್ರಮಣ್ಯೇಶ್ವರ ರಾವ್‌ರವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಖ್ಯಾತ ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಪ್ರಸಿದ್ಧ ಕನ್ನಡ ವಿಮರ್ಶಕ ಮತ್ತು ಲೇಖಕ ಶ್ರೀ ಎಸ್. ಆರ್ ವಿಜಯಶಂಕರ್ ಮೊದಲಾದ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡು ಕೃತಿ ಮತ್ತು ಕೃತಿಕಾರಕ ಬಗ್ಗೆ ಮೆಚ್ಚುಗೆಯ ಮಾತನ್ನಾಡಿದರು. ಕೇಂದ್ರ ಸರ್ಕಾರದ ಡಿ.ಆರ್.ಡಿ.ಒ. ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀ ಜಯಪ್ರಕಾಶ್‌ರಾವ್ ರವರು ಈ ಹಿಂದೆ ಡಾ. ಅಬ್ದುಲ್ ಕಲಾಂರವರ 'ವಿಂಗ್ಸ್ ಆಫ್ ಫೈರ್' ಕೃತಿಯ ಕನ್ನಡ ರೂಪ 'ಅಗ್ನಿಯ ರೇಖೆಗಳು' ಪುಸ್ತಕವನ್ನು ರಚಿಸಿದ್ದು, ಈ ಕೃತಿ ಈಗಾಗಲೇ 14 ಮರುಮುದ್ರಣಗಳನ್ನು ಕಂಡಿರುವುದು ಪುಸ್ತಕದ ಜನಪ್ರಿಯತೆಗೆ ನಿದರ್ಶನ.

## ಡಾ. ಎಸ್.ಎನ್. ಭಟ್‌ರವರ "ಮಂಗರಸನ ಮೆನು" ಪುಸ್ತಕ ಬಿಡುಗಡೆ



ನಮ್ಮ ಬಳಗದ ಹಿರಿಯ ಸದಸ್ಯರಾದ ಡಾ. ಎಸ್ ಸತ್ಯನಾರಾಯಣ ಭಟ್‌ರವರು ರಚಿಸಿರುವ "ಮಂಗರಸನ ಮೆನು" ಎಂಬ ಅಪರೂಪದ ಕೃತಿ ದಿ.5.3.2018 ರಂದು ಬಿಡುಗಡೆಯಾಗಿದೆ. ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ ರಾಜನಾಗಿದ್ದ ಮಂಗರಸನ ಸೂಪ ಶಾಸ್ತ್ರ ಕೃತಿಯು ಅಡುಗೆ ಕುರಿತಾದ ಮಹತ್ವದ ಕೃತಿ. ಆಹಾರದ ಮಹತ್ವದ ಬಗ್ಗೆ ಈ ಮಸ್ತಕದಲ್ಲಿ ಹಲವು ಅಪರೂಪದ ಮಾಹಿತಿಗಳಿವೆ. ಈ ಕೃತಿಯನ್ನು ಮಂಗರಸ ಕ್ರಿ.ಶ. 1508ರಲ್ಲಿ ರಚಿಸಿದ್ದು. ಈ ಮಸ್ತಕ ಪ್ರಕಟವಾಗುತ್ತಿರುವುದು ಇದೇ ಮೊದಲು.

ಮಂಗರಸನ ಮೂಲ ಕೃತಿಯನ್ನು ಸರಳೀಕರಣಗೊಳಿಸಿ ಹಾಗೂ ಈಗಿನ ಆಹಾರ ಪದ್ಧತಿಗೆ ತಕ್ಕಂತೆ ಕೊಂಚ ಮಾರ್ಪಾಡು ಮಾಡಿಕೊಂಡು, ಆಯುರ್ವೇದ ತಜ್ಞ ಡಾ. ಭಟ್‌ರವರು ಕನ್ನಡಕ್ಕೆ ತಂದಿದ್ದಾರೆ. ಈ ಕೃತಿಯಲ್ಲಿನ ಎಲ್ಲಾ ಅಡುಗೆಗಳು ಮಂಗರಸನ ಅರಮನೆಯಲ್ಲಿ ಪ್ರಯೋಗ ಮಾಡಲಾಗಿತ್ತು ಎಂದು ಲೇಖಕರು ತಿಳಿಸುತ್ತಾರೆ.

ಡಾ. ಎಸ್.ಎನ್.ಭಟ್‌ರವರು ಕೃಷಿ, ವೈದ್ಯಕೀಯ, ಆಹಾರವಿಜ್ಞಾನ, ವಿಜ್ಞಾನ ಹಾಗೂ ಇತಿಹಾಸದ ಬಗ್ಗೆ ಆಗಾಧ ಅಧ್ಯಯನ ಮಾಡದ್ದು, 'ಮಂಗರಸನ ಮೆನು' ಪುಸ್ತಕದಲ್ಲಿ ಆಹಾರ ತಿಂಡಿಗಳು, ಪಾನೀಯಗಳು, ಅಕ್ಕಿಯಿಂದ ತಯಾರಿಸುವ ವಿವಿಧ ಪದಾರ್ಥಗಳು ಪಲ್ಯಗಳು. ಹೀಗೆ ವೈವಿಧ್ಯಮಯ ಅಡುಗೆ ತಯಾರಿಕೆ ಬಗ್ಗೆ ವಿಧಾನಗಳನ್ನು ಸರಳವಾದ ರೀತಿಯಲ್ಲಿ ವಿವರಿಸಿದ್ದಾರೆ. ಈ ಕೃತಿಯಲ್ಲಿ ಸಸ್ಯಹಾರ * ಅಡುಗೆಯ ಬಗ್ಗೆ ಮಾತ್ರಾ ಮಾಹಿತಿಯಿದ್ದು, ಎಲ್ಲರಿಗೂ ಉಪಯೋಗವಾಗುವ ಕೃತಿಯಾಗಿರುತ್ತದೆ.

***

❑ ಬಳಗದ ಸದಸ್ಯರಾದ ಶ್ರೀ ಹೆಚ್. ಎಸ್. ಸುರೇಂದ್ರ ರವರ ಕುಟುಂಬದವರು ದಿನಾಂಕ 26.1.2018 ರಂದು. ತಮ್ಮ ಸ್ವಂತ ಊರು ಹಟ್ಟಿಕುದ್ರು ಗ್ರಾಮದ ಮೈಪಾಡಿ ಮನೆಯಲ್ಲಿ ಶತ ಚಂಡೀ ಯಾಗವನ್ನು ವಿಜೃಂಭಣೆಯಿಂದ ನೆರವೇರಿಸಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ದಿನಾಂಕ 21.1.2018 ರಿಂದ ಆರಂಭವಾಗಿ ಐದು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿತ್ತು.

## ❑ ಜಯಪ್ರಕಾಶ್‌ರಾವ್‌ಗೆ ಕಾರಂತ ಪ್ರಶಸ್ತಿ

ಬಳಗದ ಸದಸ್ಯರಾದ ಶ್ರೀ ಜಯಪ್ರಕಾಶ್‌ರಾವ್ ಕೆ. ಅವರು ಕನ್ನಡ ಮತ್ತು ಯುವ ಜನರಿಗೆ ತರಬೇತಿ ವಿಚಾರದಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಪರಿಗಣಿಸಿ ಶ್ರೀಯುತರಿಗೆ ಕೋ.ಮ. ಕಾರಂತ ಜೀವಮಾನ ಸಾಧನೆ ಪ್ರಶಸ್ತಿಯನ್ನು ದಿ. 24.3.2018 ರಂದು ನೀಡಿ, ಗೌರವಿಸಲಾಯಿತು. ಶ್ರೀಯುತರಿಗೆ ಅಭಿನಂದನೆಗಳು.

- ಬಳಗದ ಸದಸ್ಯರಾದ ಶ್ರೀ ಪಿ.ಎಸ್. ರವಿಪ್ರಕಾಶ್ ಭಟ್‌ರವರು ಪದ್ಮನಾಭನಗರದಲ್ಲಿ ನಿರ್ಮಿಸಿರುವ ನೂತನ ಬಹುಮಹಡಿಗಳ ವ್ಯಾಪಾರ ಸಂಕೀರ್ಣ "ಶ್ರೀ ಲಕ್ಷ್ಮಿ ಟವರ್ಸ್‌ನ" ಉದ್ಘಾಟನಾ ಸಮಾರಂಭ ದಿ.5.2.2018ರಂದು ಅದ್ದೂರಿಯಾಗಿ ನಡೆದಿರುತ್ತದೆ.

- ಬಳಗದ ಸದಸ್ಯರಾದ ಶ್ರೀ ಮುರಳೀಧರ ಆಚಾರ್ಯ ಮತ್ತು ಶ್ರೀಮತಿ ಪರಿಮಳರವರ ಸುಪುತ್ರ ಚಿ. ಧೀರಜ್ ಆಚಾರ್ಯ ಎಂಬ ವಟುವಿನ ಬ್ರಹ್ಮೋಪದೇಶವು ದಿ. 26.3.2018ರಂದು ಪಾಜಕ ಕ್ಷೇತ್ರದ ಶ್ರೀ ಮನ್ಮಧ್ವಾಚಾರ್ಯರ ಸನ್ನಿಧಾನದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.

***

ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ 82ನೇ ವಾರ್ಷಿಕ ಸರ್ವಸದಸ್ಯರ ಸಭೆಯು ದಿ.24.2.2018 ರಂದು ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದಿದೆ ಈ ಸಂದರ್ಭದಲ್ಲಿ ಬಳಗದ ಮಾಜಿ ಅಧ್ಯಕ್ಷರಾದ ಶ್ರೀ ಯು. ಅನಂತಪದ್ಮನಾಭ ಬಲ್ಲಾಳ್‌ರವರಿಗೆ ಪ್ರತಿಷ್ಠಿತ ಆತಿಥ್ಯೋದ್ಯಮ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಕೇಂದ್ರ ಸಚಿವರಾದ ಮಾನ್ಯ ಅನಂತಕುಮಾರ್, ಮತ್ತಿತರ ಗಣ್ಯರ ಸಮ್ಮುಖದಲ್ಲಿ ಶ್ರೀ ಅನಂತ ಪದ್ಮನಾಭ ಬಲ್ಲಾಳ್ ಮತ್ತು ಶ್ರೀಮತಿ ಪದ್ಮಮಣಿ ರವರನ್ನು ಗೌರವಿಸಲಾಯಿತು. ಸನ್ಮಾನಿತರಿಗೆ ಅಭಿನಂದನೆಗಳು.



***

- ಸಹಸ್ರ ನಾಳಿಕೇರ ಗಣಯಾಗ : ಬಳಗದ ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಕುಟುಂಬದವರಿಂದ ಉಡುಪಿ ಸಮೀಪದ ಪ್ರಸಿದ್ಧ ಆನೆಗುಡ್ಡೆ ಗಣಪತಿ ಕ್ಷೇತ್ರದಲ್ಲಿ ಸಹಸ್ರ ನಾಳಿಕೇರ ಮಹಾಗಣಪತಿ ಯಾಗವು ದಿ.25.2.2018 ರಂದು ವಿದ್ಯುಕ್ತವಾಗಿ ನೆರವೇರಿದೆ.

- ಬಳಗದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆರತಿ ಹರಿವಾಣದಲ್ಲಿ ಆಕರ್ಷಕ ಚಿತ್ತಾರಗಳನ್ನು ಮೂಡಿಸುವ ಮೂಲಕ ಪರಿಚಿತವಾಗಿರುವ ಶ್ರೀ ವೈ. ಸುಬ್ರಹ್ಮಣ್ಯ ಭಟ್ ದಂಪತಿಗಳ ಮೊಮ್ಮಗ (ಶ್ರೀಮತಿ ಆಶಾ ಭಟ್ ಮತ್ತು ಶ್ರೀ ಶ್ರೀಶ ಭಟ್‌ರವರ ಸುಪುತ್ರ) ಚಿ. ಸಾರ್ಥಕ್ ಎಂಬ ವಟುವಿನ ಬ್ರಹ್ಮೋಪದೇಶವು ದಿನಾಂಕ 25.2.2018 ರಂದು ಬೆಂಗಳೂರಿನ ಶ್ರೀಕೃಷ್ಣ ಧಾರ್ಮಿಕ ಸಭಾಂಗಣದಲ್ಲಿ ನೆರವೇರಿದೆ.

## ತಿದ್ದುಪಡಿ

**ಭೃಗುವಾಣಿಯ ಅಕ್ಟೋಬರ್ – ದಿಸೆಂಬರ್ 2017ರ ಸಂಚಿಕೆಯ ಪುಟ – 9 ರಲ್ಲಿ ಗುರುಮಧ್ವ ನಮನ ಎಂಬ ಕವಿತೆಯೊಂದಿಗೆ ಶ್ರೀ ಮಧ್ವಾಚಾರ್ಯರ ಚಿತ್ರದ ಬದಲಾಗಿ ಶ್ರೀ ಶಂಕರಾಚಾರ್ಯರವರ ಚಿತ್ರ ಮುದ್ರಣವಾಗಿದೆ. ಕಣ್ಣು ತಪ್ಪಿನಿಂದ ಆಗಿರುವ ಈ ವಿಷಯಕ್ಕೆ ಕ್ಷಮೆ ಇರಲಿ**

## ಭಾವಪೂರ್ಣ ಶ್ರದ್ಧಾಂಜಲಿ

ಬಳಗದ ಪೋಷಕರಲ್ಲಿ ಒಬ್ಬರಾದ ಶ್ರೀ ಆರ್. ಮುರಳೀಧರ (ದಾಸಪ್ರಕಾಶ್ ಐಸ್‌ಕ್ರೀಂ) ರವರ ಧರ್ಮಪತ್ನಿ ಶ್ರೀಮತಿ ವಸಂತಿಯವರು ದಿ.12.1.2018 ರಂದು ನಿಧನರಾಗಿದ್ದು, ಈ ಸಂಬಂಧ ವೈಕುಂಠ ಸಮಾರಾಧನೆಯು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ದಿ.24.1.2018 ರಂದು ವಿದ್ಯುಕ್ತವಾಗಿ ನೆರವೇರಿದೆ. ಮೃತರಿಗೆ ಬಳಗದ ಶ್ರದ್ಧಾಂಜಲಿ.

ಬಳಗದ ಹಿರಿಯ ಹಾಗೂ ಸಕ್ರಿಯ ಸದಸ್ಯರಾದ ಶ್ರೀ ಕೆ. ಶ್ರೀಪತಿ ರಾವ್‌ರವರು ದಿನಾಂಕ 26.3.2018ರಂದು ದೈವಾಧೀನರಾಗಿರುತ್ತಾರೆ. ದಿವಂಗತರ ಆತ್ಮಕ್ಕೆ ಸದ್ಗತಿ ಲಭಿಸಲಿ ಎಂದು ದೇವರಲ್ಲಿ ಪ್ರಾರ್ಥನೆ.

ಬಳಗದ ಸದಸ್ಯರಾದ ಶ್ರೀ ವಿ.ಎನ್. ಕೆದಿಲಾಯರವರು ದಿ. 31.3.2018 ರಂದು ನಿಧನರಾಗಿರುತ್ತಾರೆ. ಮೃತರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ನೀಡಲಿ.

# Start the day feeling .....



## .......Light & comfortable




***For sure relief from* CONSTIPATION *use...***

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.


With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (January - March 2018) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02